ಶ್ರೀ ಕೆ. ಹೆಚ್. ರಂಗನಾಥ್.—ಅವರು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ನನ್ನ ಗಮನಕ್ಕೂ ಕೂಡ ಇದು ಬಂದಿಲ್ಲ. ಮಾನ್ಯ ಸದಸ್ಯರು ಇದು ಯಾವ ಶಾಲೆಗೆ ಸಂಬಂಧಪಟ್ಟಿದ್ದು ಏನು ಎಂಬ ಬಗ್ಗೆ ಪತ್ರ ಬರೆದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಬಿ. ಚೌಧರಿ.—ಬಿಜಾಪುರದ ಎ. ಇ. ಓ. ಅವರು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಮಾಡಿದ ಅಪ್ರೂವಲ್ ಅನ್ನು ಕ್ಯಾನ್ಸಲ್ ಮಾಡಜಹುದೆಂದು ಪತ್ರ ಬರೆದಿದ್ದಾರೆ. ಇದು ನಿಜವೆ.

ಶ್ರೀ ಕೆ. ಹೆಚ್. ರಂಗನಾಥ್.—ನನ್ನ ಗಮನಕ್ಕೆ ಬಂದಿಲ್ಲ,

ರೋಜ್‌ಗಾರ್ ಯೋಜನೆ

೬೬೯. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಹಾಸನ ಪಟ್ಟಣದ ಮಧ್ಯದಲ್ಲಿರುವ ಚಿಪ್ಪಿನಕಟ್ಟೆಯನ್ನು ಮುಚ್ಚಿ ಈ ಪ್ರದೇಶದಲ್ಲಿ ಒಂದು ಉದ್ಯಾನವನ್ನು ನಿರ್ಮಿಸಲು ರೋಜಗಾರ್ ಯೋಜನೆಯಲ್ಲಿ ಅಂದಾಜು ತಯಾರು ಮಾಡಿರುವುದು ನಿಜವೇ;

ಆ) ಹಾಗಿದ್ದಲ್ಲಿ ಇದರ ಅಂದಾಜು ವೆಚ್ಚವೆಷ್ಟು;

ಇ) ಈ ಕೆಲಸವನ್ನು ಎಂದಿನಿಂದ ಪ್ರಾರಂಭಿಸಲಾಗುವುದು ಮತ್ತು ಎಂದು ಮುಗಿಸಲಾಗುವುದು?

ಶ್ರೀ ಟಿ.ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಹೌದು.

ಆ) ಯೋಜನೆಗೆ ಅಂದಾಜು ವೆಚ್ಚ ರೂ. ೯,೬೫,೦೦೦-೦೦

ಇ) ೧೯೯೦-೯೧ನೇ ಸಾಲಿನಲ್ಲಿ ಕೆಲಸವನ್ನು ಪ್ರಾರಂಭಿಸಿ ಆದಷ್ಟು ಜಾಗ್ರತೆ ಮುಗಿಸಲಾಗುವುದು.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ ಹಾಸನದ ಮಧ್ಯೆ ಇರುವ ೩ ಎಕರೆ ಚಿಪ್ಪಿನ ಕಟ್ಟೆಯಲ್ಲಿ ಗಲೀಜಿಲ್ಲಾ ಶೇಕರಣೆಯಾಗುತ್ತಿದೆ. ಅರ್ಧ ಮೈಲಿಗೆ ದುರ್ವಾಸನೆ ಹೊಡೆಯುತ್ತದೆ. ಪ್ರತಿನಿತ್ಯ ಕೋಟ್ಯಾಂತರ ಸೊಳ್ಳೆ ಉತ್ಪತ್ತಿಯಾಗುತ್ತಿದೆ. ೭೮ ರಲ್ಲಿ ಇದೇ ಸದನದಲ್ಲಿ ಇದರ ಬಗ್ಗೆ ಪ್ರಶ್ನೆ ಕೇಳಿದ್ದೆ. ಆಗ ಆದಷ್ಟು ಜಾಗ್ರತೆ ಮುಚ್ಚುತ್ತೇವೆಂದು ಹೇಳಿದ್ದರು. ಈಗ ೧೨ ವರ್ಷ ಕಳೆದಿದೆ. ನನಗೆ ಗೊತ್ತಿರುವ ಪ್ರಕಾರ ಇದಕ್ಕೆ ಅಂದಾಜು ಮಾಡಿ ರೋಜ್‌ಗಾರ್ ಯೋಜನೆಯಲ್ಲಿ ೬೭ ಲಕ್ಷ ರೂಪಾಯಿ ಹಣವನ್ನು ಡೆಪಾಸಿಟ್ ಮಾಡಿದ್ದಾರೆ. ಡೆಪಾಸಿಟ್ ಮಾಡಿ ೩-೪ ತಿಂಗಳಾಯಿತು. ಇದನ್ನು ಯಾವಾಗ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ಇವರು ೯೦-೯೧ನೇ ಸಾಲಿನಲ್ಲಿ ಎಂದು ಹೇಳಿದ್ದಾರೆ. ೩೦ಲ್ಲಿ ಸುತ್ತ ಮುತ್ತ ಇರತಕ್ಕಂತಹವರು ಬಡವರಾಗಿದ್ದು ಗುಡಿಸಲುಗಳನ್ನು ಹಾಕಿಕೊಂಡಿದ್ದಾರೆ. ಲಕ್ಷಾಂತರ ಜನ ಬಡವರಿಗೆ ಅನುಕೂಲವಾಗುತ್ತದೆ. ಬಡವರಿಗೆ ಉದ್ಯೋಗ ಸಿಗುತ್ತದೆ ಕೊಳಚೆ ಪ್ರದೇಶ ಹೋಗಿ ಉತ್ತಮ ಉದ್ಯಾನವನವಾಗುತ್ತದೆ. ಇದನ್ನು ಮಾಡುವುದಕ್ಕೆ ಏಕೆ ಮುಂದೂಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ಖಚಿತವಾದ ತಾರೀಖನ್ನು ಹೇಳಬೇಕು. ಹಣದ ಕೊರತೆಯಂತೂ ಇಲ್ಲ, ಆಳುಗಳು ಬೇಕಾದಷ್ಟು ಜನ ಸಿಗುತ್ತಾರೆ. ಆದ್ದರಿಂದ ಇದನ್ನು ದಯಮಾಡಿ ಮುಚ್ಚಿಸಬೇಕೆಂದು ಹೇಳುತ್ತೇನೆ. ಇದರಲ್ಲಿ ಏಕೆ ತಡವಾಗುತ್ತಿದೆ ಎಂಬ ಬಗ್ಗೆ ಕೂಡ ಸಚಿವರು ಹೇಳಬೇಕು.

೧೧-೩೦ ಎ. ಎಂ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೆ, ಈ ಕಾರ್ಯವನ್ನು ನಾವು ತಡಮಾಡುವುದಿಲ್ಲ. ೧೯೯೦-೯೧ನೇ ಸಾಲಿನಲ್ಲಿ ಈ ಕೆಲಸವನ್ನು ಕೈಗೆ ತೆಗೆದುಕೊಳ್ಳುತ್ತೇವೆ ಮತ್ತು ಅದನ್ನು ಪೂರ್ಣಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಹೆಚ್. ಹನುಮೇಗೌಡ.—ಸ್ವಾಮಿ, ಈ ಕೆಲಸಕ್ಕಾಗಿ ಬಂದಿರತಕ್ಕ ಹಣವನ್ನು ಅಲ್ಲಿ ಬೇರೆ ಬೇರೆ ಕೆಲಸಕ್ಕೆ ಖರ್ಚು ಮಾಡುತ್ತಿದ್ದಾರೆ. ಇಂಜಿನಿಯರ್‌ಗಳು ದುಡ್ಡು ಹೊಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಈ ರೋಜ್‌ಗಾರ್ ಯೋಜನೆಯಲ್ಲಿ ಹತ್ತು ಪರ್ಸೆಂಟ್ ಬಡವರಿಗೂ ಕೂಡ ಇದರ ಪ್ರಯೋಜನ ಸಿಕ್ಕುವುದಿಲ್ಲ. ಬೇಕಾಗಿಯೇ ಈ ಕೆಲಸವನ್ನು ಅವರು ತಡಮಾಡುತ್ತಿದ್ದಾರೆ: ಇಂಥ

ಪ್ರಮುಖ ಕೆಲಸವನ್ನು ಏತಕ್ಕೆ ಮಾಡಿಸಬಾರದು ? ಇದಕ್ಕಾಗಿ ಹಣ ಇದೆ, ಆಳುಗಳು ಸಿಕ್ಕುತ್ತಾರೆ, ಎಸ್ಟಿಮೇಟ್ ತಯಾರಾಗಿದೆ. ಆದರೂ ಈ ಕೆಲಸವನ್ನು ತಡಮಾಡುತ್ತಿರುವ ಉದ್ದೇಶವೇನು ? ದಯವಿಟ್ಟು ಬೇರೆ ಕೆಲಸಗಳನ್ನು ನಿಲ್ಲಿಸಿ ಈ ಕೆಲಸವನ್ನು ತೀವ್ರಗತಿಯಿಂದ ಮಾಡಿಸಿಕೊಡುತ್ತೀರಾ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವು ಏನೆಂಬುದು ನನಗೆ ಅರ್ಥವಾಗುತ್ತಿದೆ. ಕೆಲಸ ತಡವಾಯಿತು ಎಂದು ಹೇಳಿದರು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ದುಡ್ಡು ಹೊಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆಂದು ಹೇಳಿದರು. ಇದು ಬಹಳ ಗಂಭೀರವಾದ ಪ್ರಶ್ನೆಯಾಗುತ್ತದೆ: ದುಡ್ಡು ಯಾರು ಹೊಡೆಯುತ್ತಾರೆಂಬುದು ಇಲ್ಲಿ ರೆಕಾರ್ಡ್‌ಗೆ ಹೋಗುತ್ತದೆ. ಆದ್ದರಿಂದ ನಾನು ಇಷ್ಟುಮಾತ್ರ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ. ಈ ಕೆಲಸಕ್ಕೆ ಎಲ್ಲಿ ಸಿದ್ಧತೆಗಳೂ ಆಗಿವೆ. ಇದು ಕಾರ್ಯಾಚರಣೆಯ ಹಂತದಲ್ಲಿದೆ, ೧೯೯೦-೯೧ನೇ ಸಾಲಿನಲ್ಲಿ ಮಾನ್ಯ ಸದಸ್ಯರು ಮತ್ತೆ ಈ ಪ್ರಶ್ನೆಯನ್ನು ಇಲ್ಲಿ ಕೇಳದಂಥ ರೀತಿಯಲ್ಲಿ ಮಾಡಿಮುಗಿಸುತ್ತೇವೆಂದು. ಹೇಳಬಯಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ್ರು.— ದುಡ್ಡನ್ನು ಹೊಡೆಯುತ್ತಾರೆ ಎಂದರೆ ಮಾನ್ಯ ಮಂತ್ರಿಗಳು ದುಡ್ಡನ್ನು ಹೊಡೆಯುತ್ತಾರೆ ಅಂತ ಅಲ್ಲ. ಅಲ್ಲಿರತಕ್ಕ ಇಂಜಿನಿಯರ್‌ಗಳು ಇನ್ನು ಬೇರೆ ಬೇರೆಯವರು ಅವರಿವರ ಹೆಬ್ಬೆಟ್ಟನ್ನು ಒತ್ತಿ ಹಣವನ್ನು ಖರ್ಚುಮಾಡಿದ್ದೇವೆಂದು ತೋರಿಸುತ್ತಾರೆ. ಮಾನ್ಯ ಮಂತ್ರಿಗಳು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಇವರು ದುಡ್ಡನ್ನು ಹೊಡೆಯುವುದಕ್ಕೆ ಮಾಡುತ್ತಿದ್ದಾರೆಂದು ನಾನು ಹೇಳಲಿಲ್ಲ. ಈ ರೋಜ್‌ಗಾರ್ ಯೋಜನೆಯಲ್ಲಿ ಎಷ್ಟು ಕೆಲಸಗಳನ್ನು ಕಂಟ್ರಾಕ್ಟ್ ದಾರರಿಗೆ ಕೊಡದೆ ನಿಯಮಗಳ ಪ್ರಕಾರ ಆಗಿದ ಎಂಬುದನ್ನು ತಾವು ತಿಳಿಸಬೇಕು. ಇದನ್ನು ತಾವು ಪರಿಶೀಲನೆ ಮಾಡಿ ಮುಂದಿನ ಸದನದಲ್ಲಿ ನನಗೆ ಉತ್ತರಕೊಡಿ ಆದರೆ ಅದಷ್ಟು ಜಾಗ್ರತೆ ಈ ಕೆಲಸವನ್ನು ಕೈಗೆ ತೆಗೆದುಕೊಂಡು ಮುಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.— ಈ ಕೆಲಸವನ್ನು ೧೯೯೦-೯೧ರ ಸಾಲಿನಲ್ಲಿ ಪ್ರಾರಂಭಿಸುತ್ತೇವೆ ಎಂದು ಹೇಳಿದ್ದೇನೆ. ಆದರೆ ಮಾನ್ಯ ಸದಸ್ಯರು ಮಾತನಾಡುವಾಗ ಇಂಜಿನಿಯರ್‌ಗಳು ಅಥವಾ ಬೇರೆಯವರು ದುಡ್ಡನ್ನು ಹೊಡೆಯುತ್ತಿದ್ದಾರೆಂದು ಹೇಳಿದರು, ಯಾರು ದುಡ್ಡನ್ನು ಹೊಡೆಯುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರು ನಿರ್ದಿಷ್ಟವಾಗಿ ಹೇಳಿದರೆ ಅವರು ಎಷ್ಟೇ ದೊಡ್ಡ ಅಧಿಕಾರಿಯಾಗಿರಲಿ ಅವರನ್ನು ಸ್ಥಳದಲ್ಲಿಯೇ ಅಮಾನತ್ತಿನಲ್ಲಿಡುತ್ತೇನೆ ಮತ್ತು ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

(ಚು ಪ್ರ-೨೦೬ (೪೨೯)

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವ ವಿದ್ಯಾಲಯ ಸ್ಥಾಪನೆ

೪೪೩. ಶ್ರೀ ಎಸ್. ಹೆಚ್. ಕಾಜಲಗಿ (ಬೈಲಹೊಂಗಲ),— ಮಾನ್ಯ ಶಿಕ್ಷಣ ಯುವಜನ ವ್ಯವಹಾರಗಳು, ಕ್ರೀಡೆಗಳು ಕನ್ನಡ ಹಾಗೂ ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವ ವಿದ್ಯಾಲಯದ ಕಾರ್ಯ ಎಂದಿನಿಂದ ಪ್ರಾರಂಭವಾಗುವುದು ;

ಆ) ಈಗ ಅದು ಯಾವ ಹಂತದಲ್ಲಿದೆ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವ ಬಗ್ಗೆ ಯಾವುದೇ ದಿನಾಂಕವನ್ನು ನಿಗದಿ ಪಡಿಸಿಲ್ಲ.

ಆ) ಈ ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಹೆಚ್. ಕಾಜಗಿ.— ಮಾನ್ಯ ಅಧ್ಯಕ್ಷರೆ, '' ಬೆಳಗಾವಿಯಲ್ಲಿ ತಾಂತ್ರಿಕ ವಿಶ್ವ ವಿದ್ಯಾಲಯದ ಕಾರ್ಯ ಎಂದಿನಿಂದ ಪ್ರಾರಂಭವಾಗುವುದು ? ಎಂಬ ನನ್ನ ಪ್ರಶ್ನೆಗ'' ಈ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸುವ ಬಗ್ಗೆ ಯಾವುದೇ ದಿನಾಂಕವನ್ನು ನಿಗದಿಪಡಿಸಿಲ್ಲ ಎಂದು ಮಾನ್ಯ